ಅ) ರಾಜ್ಯದಲ್ಲಿ ಎಷ್ಟು ಹೆಕ್ಟೇರ್‌ನಲ್ಲಿ ದ್ರಾಕ್ಷಿ ಬೆಳೆಯಲಾಗುತ್ತಿದೆ; ದ್ರಾಕ್ಷಿ ಬೆಳೆಗಾರರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬರಗಾಲದಿಂದ ನೀರಿನ ಕೊರತೆಯಿಂದ ಪಾರಾಗಲು ದ್ರಾಕ್ಷಿ ಬೆಳೆಗಾರರಿಗೆ ನಬಾರ್ಡ್‌ನಿಂದ ಕಡಿಮೆ ಬಡ್ಡಿ ದರದಲ್ಲಿ ಎಷ್ಟು ಸಾಲ ನೀಡಲಾಗಿದೆ ವಿವರ ಒದಗಿಸುವುದು;

ಇ) ದ್ರಾಕ್ಷಿ ಬೆಳೆಗೆ ಬೆಂಬಲ ಬೆಲೆ ನೀಡಲು ಸರಕಾರ ಯೋಜಿಸಲಾಗುತ್ತಿದೆಯೆ ವಿವರ ಒದಗಿಸುವುದು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) 11,719 ಹೆಕ್ಟೇರ್

ಬಂದಿದೆ.

ಆ) ರೂ. 318.78 ಲಕ್ಷಗಳು

ಜಿಲ್ಲೆ	ಫಲಾನುಭವಿಗಳು	ಪ್ರದೇಶ (ಎಕರೆಗಳಲ್ಲಿ)	ನೀಡಲಾಗಿರುವ ಸಾಲದ ಮೊತ್ತ (ಲಕ್ಷ ರೂ.ಗಳಲ್ಲಿ)
ಬಿಜಾಪುರ	293	1259	314.68
ಬೆಳಗಾವಿ	3	17	4.10

ಇ) ಇಲ್ಲ

ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ಅಂತ್ಯೋದಯ ಅನ್ನ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ

566 (4889) : ಶ್ರೀ ದಿನೇಶ್ ಗುಂಡುರಾವ್ (ಗಾಂಧೀನಗರ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ನೆರವಿನ ಅಂತ್ಯೋದಯ ಅನ್ನ ಯೋಜನೆಯನ್ನು ಬೆಂಗಳೂರು ನಗರದಲ್ಲಿ ಜಾರಿಗೊಳಿಸಲಾಗಿರುವುದೇ; ಹಾಗಿದ್ದಲ್ಲಿ, ಈ ಯೋಜನೆಯ ಫಲಾನುಭವಿಗಳ ಆಯ್ಕೆಗೆ ಇರುವ ಮಾನದಂಡವೇನು;

ಆ) ಬೆಂಗಳೂರು ನಗರದಲ್ಲಿ ನಿಗದಿಪಡಿಸಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ವಿಧಾನ ಸಭಾ ಕ್ಷೇತ್ರವಾರು ಮಾಹಿತಿ ನೀಡುವುದು);

ಇ) ಈ ಯೋಜನೆಯನ್ನು ಎಂದಿನಿಂದ ಜಾರಿಗೊಳಿಸಲಾಗುವುದು/

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಹೌದು.

ಬೆಂಗಳೂರು ನಗರದಲ್ಲಿ ಹಾಲಿ ಇರುವ ಬಿ.ಪಿ.ಎಲ್ ಕುಟುಂಬಗಳ ಪೈಕಿ ಕಡು ಬಡ ಕುಟುಂಬಗಳನ್ನು ಈ ಯೋಜನೆಯಡಿ ಫಲಾನುಭವಿಗಳಾಗಿ ಆಯ್ಕೆ ಮಾಡಲಾಗುವುದು.

ಆ) 14620.

ವಿಧಾನಸಭಾ ಕ್ಷೇತ್ರವಾರು ಫಲಾನುಭವಿಗಳ ಸಂಖ್ಯೆ ಸಭ್ಯದಲ್ಲಿ ದೊರೆಯುವುದಿಲ್ಲ. ಆದರೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ವಲಯವಾರು ನಿಗದಿ ಪಡಿಸಿರುವ ಫಲಾನುಭವಿಗಳ ಸಂಖ್ಯೆಯು ಈ ಕೆಳಕಂಡಂತಿದೆ.

ಕ್ರ.ಸ.	ವಲಯವಾರು ಹೆಸರು	ಚಾಲ್ತಿಯಲ್ಲಿರುವ ಹಳದಿ ಪಡಿತರ ಚೀಟಿ	ನಿಗದಿ ಪಡಿಸಿರುವ ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿ
1.	ಉತ್ತರವಲಯ	24376	2590
2.	ದಕ್ಷಿಣವಲಯ	47367	5035
3.	ಪೂರ್ವವಲಯ	17452	1855
4.	ಪಶ್ಚಿಮವಲಯ	34389	3655
5.	ಕೇಂದ್ರವಲಯ	13996	1485
	ಒಟ್ಟು	137580	14620

ಇ) ಯೋಜನೆಯನ್ನು ಜಾರಿಗೊಳಿಸುವ ಪ್ರಕ್ರಿಯೆಯು ಫಲಾನುಭವಿಗಳನ್ನು ಗುರುತಿಸುವಿಕೆ, ಗುರುತಿಸಲ್ಪಟ್ಟ ಫಲಾನುಭವಿಗಳನ್ನು ಗ್ರಾಮಸಭೆಗಳಲ್ಲಿ ಸ್ಥಿರೀಕರಿಸುವಿಕೆ, ಪಡಿತರ ಚೀಟಿ ವಿತರಣೆ, ಕೇಂದ್ರ ಸರ್ಕಾರದಿಂದ ಆಹಾರಧಾನ್ಯ ಬಿಡುಗಡೆ ಮತ್ತು ಅಂತಿಮವಾಗಿ ಆಹಾರಧಾನ್ಯವನ್ನು ನ್ಯಾಯಬೆಲೆ ಅಂಗಡಿಗಳಿಗೆ ಹಂಚಿಕೆ ಮಾಡುವುದು ಮುಂತಾದ ಕಾರ್ಯಗಳನ್ನು ಒಳಗೊಂಡಿದೆ. ಹೊಸದಾಗಿ ಗುರುತಿಸಲ್ಪಟ್ಟ ಕುಟುಂಬಗಳಿಗೆ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಆದಷ್ಟು ಬೇಗನೆ ಮುಕ್ತಾಯಗೊಳಿಸಲಾಗುವುದು.

ಬಬಲೇಶ್ವರ ಏತನೀರಾವರಿ ಯೋಜನೆಯ ಮಂಜೂರಾತಿ ಬಗ್ಗೆ

330 (306) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮೇಗೌಡ (ತಿಕೋಟ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಬಲೇಶ್ವರ ಏತ ನೀರಾವರಿ ಯೋಜನೆಯನ್ನು ಮಂಜೂರು ಮಾಡಲಾಗಿದೆಯೇ;

ಆ) ಯೋಜನೆಯ ಸಮೀಕ್ಷಾ ಕಾರ್ಯ ಮತ್ತು ಅನ್ವೇಷಣಾ ಕೆಲಸಗಳನ್ನು ಪೂರ್ಣಗೊಳಿಸಲಾಗಿದೆಯೇ;

ಇ) ಪೂರ್ಣಗೊಳಿಸಿದಲ್ಲಿ, ಈ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆಯೇ;

ಈ) ಯೋಜನೆಯನ್ನು ಪ್ರಾರಂಭಿಸಲು ಹಾಕಿಕೊಂಡ ಕಾಲಮಿತಿ ಏನು?

ಶ್ರೀ ಹೆಚ್. ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಬಬಲೇಶ್ವರ ಏತ ನೀರಾವರಿ ಯೋಜನೆಯ ಪ್ರಾಥಮಿಕ ತನಿಖಾ ವರದಿಗೆ ಸರ್ಕಾರದಿಂದ ಅನುಮೋದನೆ ನೀಡಲಾಗಿದ್ದು, ವಿವರವಾದ ಸಮೀಕ್ಷಾ ಕಾರ್ಯ ಹಾಗೂ ಅನ್ವೇಷಣೆಗೆ ಅನುಮೋದನೆ ನೀಡಲಾಗಿದೆ.

ಆ) ಪೂರ್ಣಗೊಳಿಸಲಾಗಿದೆ.